**ಪಿಡಬ್ಲೂಃ 1** **ಸಿ.ಸಿ ನಂ.788/2017**

ದಿನಾಂಕ **15-03-2023** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಟಿ.ವಿ.ವಿ. ಆರೋಪಿ ಪರ ವಕೀಲರಿಂದಃ-**

ವ್ಯವಸಾಯದಿಂದ ನನಗೆ ಆದಾಯ ಬರುತ್ತಿದೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ಕೊಡುತ್ತೇನೆ ಎನ್ನುತ್ತಾರೆ. ನಾನು ಮನೆಗಳನ್ನು ಕಟ್ಟುವ ಕೆಲಸ ಮಾಡುತ್ತೇನೆಂದು ತೋರಿಸಲು ನಾನು ಯಾವುದೇ ಲೈಸನ್ಸ್ ನ ಪ್ರತಿಯನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ಅವರು ಕೇಳಿಲ್ಲ, ಕೊಟ್ಟಿಲ್ಲ ಎನ್ನುತ್ತಾರೆ. ಈ ಮೇಲೆ ಹೇಳಿದ ಎಲ್ಲಾ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಉತ್ತರಿಸಿಲ್ಲ.

ನಾನು 15 ವರ್ಷಗಳಿಂದ ಬ್ಯಾಂಕ್ ನ ಮುಖಾಂತರ ವ್ಯವಹಾರ ಮಾಡುತ್ತಿದ್ದೇನೆ. ನಾನು ಹಣ ಕೊಟ್ಟಿದ್ದೆ ಎಂದು ಹೇಳಿದ ದಿನ ಬ್ಯಾಂಕಿನಿಂದ ಯಾವುದೇ ಹಣ ಡ್ರಾ ಮಾಡಿಲ್ಲ ಎಂದರೆ ಸಾಕ್ಷಿಯು ನಾನು ಮನೆಯಲ್ಲಿ ಕೂಡಿಟ್ಟಿದ್ದ ಹಣವನ್ನು ಕೊಟ್ಟಿರುತ್ತೇನೆ ಎನ್ನುತ್ತಾರೆ. 2 ವರ್ಷಗಳಿಂದ ನಾನು 2 ಲಕ್ಷ ರೂ. ಹಣವನ್ನು ಕೂಡಿಟ್ಟಿದ್ದೆ. ಸದರಿ ವಿಷಯವನ್ನು ನಾನು ನನ್ನ ದೂರಿನಲ್ಲಿ ಮತ್ತು ನೋಟಿಸ್ ನಲ್ಲಿ ಹೇಳಿಲ್ಲ ಎಂದರೆ ಸಾಕ್ಷಿಯು ಉತ್ತರಿಸಿಲ್ಲ. ಸಾಕ್ಷಿಯು ಮುಂದುವರೆದು ನಾನು ಹಣ ಕೊಟ್ಟಿರುವುದು ನಿಜ ಎನ್ನುತ್ತಾರೆ. ಸಾಕ್ಷಿಯು ಪುನಃ ಮುಂದುವರೆದು ನಾನು ಓದಿಲ್ಲ ಎನ್ನುತ್ತಾರೆ. ಸಾಕ್ಷಿಯು ಮತ್ತೊಮ್ಮೆ ಮುಂದುವರೆದು ನಾನು ದೂರಿನಲ್ಲಿ ಅದನ್ನು ಓದಿಲ್ಲ ಎನ್ನುತ್ತಾರೆ.

ಆಗಸ್ಟ್ 2017 ರಂದು ಆರೋಪಿಗೆ ನೋಟಿಸು ಜಾರಿಯಾಗಿರುತ್ತದೆ. ನಾನು ಹೇಳುವಂತೆ ಆರೋಪಿಗೆ ನೋಟಿಸು ಜಾರಿಯಾಗಿಲ್ಲ ಎಂದರೆ ಸರಿಯಲ್ಲ.

**ಪಿಡಬ್ಲ್ಯೂ: 1** ಸಿ.ಸಿ ನಂ.788/2017

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.